ಸಪ್ಪೆರೋಗದಿಂದ ಹೋಗಿದೆ ಎನ್ನುವ ಅಂಕಿ ಅಂಶ ತೆಗೆಸುವುದು ಸ್ವಲ್ಪ ಕಷ್ಟವಾಗುತ್ತದೆ. ಆಮೇಲೆ ಸನ್ಮಾನ್ಯ ಸದಸ್ಯರು ಗಂಟುರೋಗದಿಂದ ಅಥವಾ ಇತರೆ ಯಾವುದೇ ರೋಗದಿಂದ ಬೆಳೆ ನಷ್ಟವಾಗಿರುವ ಬಗ್ಗೆ ಸರ್ಕಾರದ ಸಹಾಯಧನ ಕೊಡುವ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ತರಹ ರೋಗಗಳಿಗೆ ಪರಿಹಾರ ಕೊಡುತ್ತಾ ಹೋದರೆ, ಬಹುಶಃ ಈ ರೋಗ ಬರುವುದಕ್ಕೆ ಉತ್ತೇಜನ ಕೊಟ್ಟ ಹಾಗೆ ಆಗುತ್ತದೆ. ಈ ರೋಗವನ್ನು ತಡೆಗಟ್ಟುವಂಥ ಕೆಲಸಕ್ಕೆ ಈ ಸಾರಿ ವಿಶೇಷವಾದಂಥ ಯೋಜನೆಯನ್ನು ನಬಾರ್ಡಗೆ ನಿರೂಪಣೆ ಮಾಡಿ ಕಳಿಸಿಕೊಟ್ಟಿದೆ. ಇದರ ಉದ್ದೇಶ ಏನೆಂದರೆ ಪ್ರತಿಯೊಬ್ಬ ರೈತನಿಗೆ ರೇಷ್ಮೆಹುಳ ಸಾಕಾಣಿಗೆ ಮನೆ ಇದ್ದೇ ಇರಬೇಕು. ರೋಗ ನಿಯಂತ್ರಣ ಮಾಡುವುದಕ್ಕೆ ಬೇಕಾದಂಥ ಕನಿಷ್ಟ ಸಾಮಗ್ರಿಗಳು ಅವನಿಗೆ ಪ್ರತ್ಯೇಕವಾಗಿ ಇರಬೇಕೆಂದು ಗುರಿಯನ್ನು ಇಟ್ಟುಕೊಂಡು ಅದಕ್ಕೆ ಸಾಲದ ಯೋಜನೆಯನ್ನು ಮಾಡಿ ನಬಾರ್ಡಿಗೆ ಕಳಿಸಿಕೊಟ್ಟಿದ್ದೇವೆ. ಅದಕ್ಕೆ ಮಂಜೂರಾತಿ ಬಂದನಂತರ ಪ್ರೈಸ್ ಸ್ಟೆಬಿಲೈಸೇಶನ್ ಫಂಡ್ ಏನಿದೆ, ಅದರಿಂದ ಸುಮಾರು 15 ಪರ್ಸೆಂಟ್ ಸಬ್ಸಿಡಿ ಅಥವಾ ಪ್ರೋತ್ಸಾಹಧನ ಕೊಟ್ಟು ಪ್ರತ್ಯೇಕವಾದ ರೇಷ್ಮೆ ಹುಳ ಸಾಕಾಣಿಕೆಗೆ ಮನೆ ಕೊಡುವುದಕ್ಕೆ ಮುಂದೆ ಬರತಕ್ಕಂಥ ಯೋಜನೆಯನ್ನು ನಿರೂಪಣೆ ಮಾಡುತ್ತೇವೆ.

SRI M. RAJASHEKARAMUTHY:- Since the old seed area is affected by pebrin disease and since the eradication of the disease has become difficult, will the Government consider the question of organising an alternative seed area?

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಇದು ಸ್ವಲ್ಪ ಸೂಕ್ಷ್ಮವಾದ ವಿಚಾರ. ಈಗ ಬಿತ್ತನೆ ಪ್ರದೇಶ ವಲಯವನ್ನು ಡಿಕ್ಲೇರ್ ಮಾಡಿದ್ದೇವೆ. ಆ ಪ್ರದೇಶದಲ್ಲಿರತಕ್ಕಂಥ ರೈತರು ಬಿತ್ತನೆ, ಬೆಳೆಯಲಿಕ್ಕೆ ಅವಲಂಬಿಸಿದ್ದಾರೆ. ಬಿತ್ತನೆ ಕಾನ್ಸೆಪ್ಟ್ ಮೇಯಂಟೇನ್ ಮಾಡುವುದಕ್ಕೆ ಟ್ರೈನ್‌ಅಪ್ ಆಗಿದ್ದಾರೆ. ಬೇರೆ ಒಂದು ಬಿತ್ತನೆ ಪ್ರದೇಶವನ್ನು ಮಾಡಬೇಕಾದರೆ ಆ ಪ್ರದೇಶದಲ್ಲಿರತಕ್ಕಂಥ ಹಾಲಿ ಇರತಕ್ಕಂಥ ಸಿ.ಬಿ. ರೇರಿಂಗ್ ಏನಿದೆ ಅದನ್ನು ತೆಗೆಯಬೇಕು ಮತ್ತೆ ಅವರಿಗೆ ಮೂಲ ಬಿತ್ತನೆಗೆ ತಳಿಗಳನ್ನು ಸಾಕುವುದಕ್ಕೆ ವೈಜ್ಞಾನಿಕ ತರಬೇತಿಯನ್ನು ಕೊಡಬೇಕು. ಆದ್ದರಿಂದ ಇದಕ್ಕೆ ಅದರದ್ದೇ ಆದ ತಾಂತ್ರಿಕವಾದ ಕಷ್ಟ ಇದೆ. ಆದರೆ ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತದೆ.

ಹೈದರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆ

94 (491) ಶ್ರೀ ಬಾಬುರಾವ್ ಚವ್ಹಾಣ್ (ಶಹಾಬಾದ್):- ಮಾನ್ಯ ಬಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲಿ ಮಧ್ಯಮ ಹಾಗೂ ಭಾರಿ ಪ್ರಮಾಣದ ಕೈಗಾರಿಕೆ ತೆರೆಯಲು ರಾಜ್ಯ ಸರ್ಕಾರವು ಯೋಜನೆ ಮಾಡುತ್ತಿದೆಯೇ?

ಆ) ಹಾಗಿದ್ದಲ್ಲಿ ಆ ಕೈಗಾರಿಕೆಗಳು ಯಾವುವು?

ಇ) ಖಾಸಗಿ ಉದ್ದಿಮೆದಾರರು ಬಹಳಷ್ಟು ಪ್ರಮಾಣದಲ್ಲಿ ಸಿಮೆಂಟ್ ಕಾರ್ಖಾನೆ ತೆರೆಯುತ್ತಿರುವುದರಿಂದ ಸರ್ಕಾರದ ಕಡೆಯಿಂದ ಏಕೆ ಸಿಮೆಂಟ್ ಕಾರ್ಖಾನೆ ಹೈದ್ರಾಬಾದ್-ಕರ್ನಾಟಕ ಭಾಗದಲ್ಲಿ ತೆಗೆಯಲಾರರು?

ಈ) ಈ ವಿಷಯದಲ್ಲಿ ಸರ್ಕಾರದ ನಿಲುವು ಏನು?

ಶ್ರೀಮತಿ ಮನೋರಮ ಮಧ್ವರಾಜ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು.):-

ಅ) ರಾಜ್ಯ ಸರ್ಕಾರದ ವತಿಯಿಂದ ಸರ್ಕಾರಿ ವಲಯದ ಕೈಗಾರಿಕೆಯನ್ನು ಸ್ಥಾಪಿಸುವ ಯಾವುದೇ ಯೋಜನೆ ಇರುವುದಿಲ್ಲ

ಆ) ಅನ್ವಯಿಸುವುದಿಲ್ಲ.

ಇ) " ಅ " ನಲ್ಲಿ ತಿಳಿಸಿರುವಂತೆ ಸರ್ಕಾರದ ವತಿಯಿಂದ ಯಾವುದೇ ವಿಧವಾದ ಕೈಗಾರಿಕೆಯನ್ನು ಸ್ಥಾಪಿಸುವ ಯೋಜನೆ ಇರುವುದಿಲ್ಲ. ಆ ಖಾಸಗಿ ಕಾರ್ಖಾನೆ ತೆರೆಯಲು ಮುಂದು ಬಂದಲ್ಲಿ ಅವರಿಗೆ ಕೈಗಾರಿಕಾ ಇಲಾಖೆಯ ವತಿಯಿಂದ ಎಲ್ಲಾ ವಿಧವಾದ ಸಹಾಯ ನೀಡಲಾಗುವುದು.

ಈ) " ಇ " ನಲ್ಲಿ ತಿಳಿಸಿರುವಂತೆ ಸರ್ಕಾರದ ಈಗಿನ ಹಣಕಾಸಿನ ಸ್ಥಿತಿ ಹಾಗೂ ಸರ್ಕಾರಿ ವಲಯದಲ್ಲಿ ಈಗ ಸ್ಥಾಪಿಸಲ್ಪಟ್ಟಿರುವ ಕೈಗಾರಿಕೆ ಸ್ಥಿತಿಗೆ ಅನುಗುಣವಾಗಿ ಸರ್ಕಾರವು ಯಾವುದೇ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆಯನ್ನು ಹಾಕಿಕೊಂಡಿರುವುದಿಲ್ಲ. ಆದರ ಜೊತೆಗೆ ಜುಲೈ 91 ರಲ್ಲಿ ಘೋಷಿಸಲ್ಪಟ್ಟ ಕೇಂದ್ರ ಸರ್ಕಾರದ ಹೊಸ ಕೈಗಾರಿಕಾ ನೀತಿ ಅನ್ವಯ ಹೊಸ ಕೈಗಾರಿಕೆಗಳನ್ನು ಖಾಸಗಿ ವಲಯದಲ್ಲಿ ಉತ್ತೇಜಿಸುವುದು ಸರ್ಕಾರದ ನೀತಿಯಾಗಿದೆ. ಆದುದರಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ಅಥವಾ ಇನ್ನೂ ಯಾವುದೇ ಜಿಲ್ಲೆಯಲ್ಲಿ ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರದ ಹೊಸ ಕೈಗಾರಿಕಾ ಘಟಕಗಳನ್ನು ತೆರೆಯುವ ಯೋಜನೆ ಸದ್ಯದಲ್ಲಿ ಇರುವುದಿಲ್ಲ.

ಶ್ರೀ ಬಾಬುರಾವ್ ಚವ್ಹಾಣ್:- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳನ್ನು ನಾನು ಪ್ರಶ್ನೆ ಕೇಳುತ್ತೇನೆ. ಹೈದರಾಬಾದ್ ಕರ್ನಾಟಕ ಭಾಗ, ಇದು ಬಹಳ ಹಿಂದುಳಿದ ಭಾಗ. ಇಲ್ಲಿ ಜನರಿಗೆ ನೌಕರಿ ಸಿಗುವುದಿಲ್ಲ. ಪಾಪ, ಆ ಭಾಗದ ಜನರಿಗೆ ಮತ್ತು ಬೆಂಗಳೂರು, ಮೈಸೂರು ಭಾಗದ ಜನರಿಗೆ ಹೊಂದಾಣಿಕೆ ಮಾಡಿ ನೋಡಿದರೆ, ಈ ಕಡೆ ಇರುವವರಿಗೆ ಕ್ಲಾಸ್-ಒನ್, ಅಥವಾ ಸ್ಪರ್ಧಾತ್ಮಕ ಪರೀಕ್ಷೇಗಳಲ್ಲಿ ಒಳ್ಳೆಯ ಜಾಬ್‌ಗಳು ಸಿಗುತ್ತವೆ. ಆದರೆ ಹೈದರಾಬಾದ್ ಕರ್ನಾಟಕ ಭಾಗದಿಂದ ಬಂದಿರತಕ್ಕಂಥ ಅಭ್ಯರ್ಥಿಗಳಿಗೆ ಒಳ್ಳೆಯ ಜಾಬ್ ಸಿಗುವುದಿಲ್ಲ. ಸಿಕ್ಕಿದರೂ ಅವರಿಗೆ ಕ್ಲರಿಕಲ್ ಅಥವ ಪೀವನ್ ಪೋಸ್ಟ್ ಸಿಗುತ್ತದೆ. ನಮ್ಮ ಹುಡುಗರಿಗೆ ಕಾಂಪಿಟಿಟಿವ್ ಎಕ್ಸಾಮ್‌ನಲ್ಲಿ ಕಾಂಪೀಟ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಯವರಿಗೆ ಹೇಳಿರತಕ್ಕಂಥ ವಿಷಯ ಹೈದರಾಬಾದ್ ಕರ್ನಾಟಕದಲ್ಲಿ ಸರ್ಕಾರದಿಂದ ಒಂದು ದೊಡ್ಡ ಫ್ಯಾಕ್ಟರಿ ಹಾಕಿ ಅಥವಾ ಮೀಡಿಯಂ ಫ್ಯಾಕ್ಟರಿ ಹಾಕಿ ಅಲ್ಲಿರತಕ್ಕ ಆ ಭಾಗದ ಜನರಿಗೆ ನೌಕರಿ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ?

ಶ್ರೀಮತಿ ಮನೋರಮಾ ಮದ್ವರಾಜ್:- ಮಾನ್ಯ ಸಭಾಧ್ಯಕ್ಷರೇ, ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಸರ್ಕಾರಿ ಸ್ವಾಮ್ಯದಿಂದ ಯಾವುದೇ ಕೈಗಾರಿಕೆ ಸ್ಥಾಪಿಸುವ ಯೋಜನೆ ಸರ್ಕಾರದಲ್ಲಿ ಇಲ್ಲ ಎಂದು ಹೇಳಿದ್ದೇನೆ. ಅವರು ಹೈದರಾಬಾದ್ ಕರ್ನಾಟಕ ವಿಭಾಗದವರು ಬಹಳ ಹಿಂದುಳಿದಿದ್ದಾರೆ ಎಂದು ಹೇಳುತ್ತಾರೆ. ಈಗಾಗಲೇ ಗುಲ್ಬರ್ಗಾದಲ್ಲಿ 5 ಮೇಜರ್ ಮತ್ತು ಮೀಡಿಯಮ್ ಸೀಮೆಂಟ್ ಪ್ಲಾಂಟ್‌ಗಳಿವೆ. ಹಾಗೆಯೇ ೨೦ ಮಿನಿ ಸಿಮೆಂಟ್ ಪ್ಲಾಂಟ್‌ಗಳಿವೆ. ಹೀಗಿರುವಾಗ ಇನ್ನೂ ಕೂಡ ಯಾರಾದರೂ ಖಾಸಗಿಯವರು ಮುಂದೆ ಬಂದರೆ, ಸರ್ಕಾರ ಮೂಲಭೂತ ಸೌಲಭ್ಯಗಳನ್ನು ಕೊಡುತ್ತದೆ. ಇದರಲ್ಲಿ ನಮ್ಮದೇನೂ ಅಭ್ಯಂತರ ಇಲ್ಲ. ಸರ್ಕಾರಿ ಸ್ವಾಮ್ಯದಿಂದ ಯಾವುದೇ ಒಂದು ಕೈಗಾರಿಕೆಯನ್ನು ಸ್ಥಾಪಿಸುವ ಯೋಜನೆ ಇಲ್ಲ.

ಶ್ರೀ ಬಾಬುರಾವ್ ಚವ್ಹಾಣ್ :- ಖಾಸಗಿ ಉದ್ದಿಮೆದಾರರು ಬಹಳಷ್ಟು ಪ್ರಮಾಣದಲ್ಲಿ ಸಿಮೆಂಟ್ ಕಾರ್ಖಾನೆ ತೆರೆಯುತ್ತಿದ್ದಾರೆ. ಆದರೆ ಸರ್ಕಾರದ ಕಡೆಯಿಂದ ತೆಗೆಯುತ್ತೀರಾ ಎಂದು ಪ್ರಶ್ನೆ ಕೇಳಿದ್ದೇನೆ. ಅವರ ಉತ್ತರದಲ್ಲಿ ನಾನು ಹೇಳಿದ್ದಾರೆಂದರೆ, ಖಾಸಗಿ ಉದ್ದಿಮೆಗಳು ಗುಲ್ಬರ್ಗಾ ಜಿಲ್ಲೆಯಲ್ಲಿ ಹೊಸ ಸಿಮೆಂಟ್ ಕಾರ್ಖಾನೆ ತೆರೆಯಲು ಮುಂದೆ ಬಂದಲ್ಲಿ ಅವರಿಗೆ ಕೈಗಾರಿಕಾ ಇಲಾಖಾ ಮತಿಯಿಂದ ಎಲ್ಲಾ ವಿಧವಾದ ಸಹಾಯ ನೀಡಲಾಗುವುದು ಎಂದು ಹೇಳಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಎಷ್ಟು ಸಿಮೆಂಟ್ ಫ್ಯಾಕ್ಟರಿಗಳು ಓಡುತ್ತಿವೆ, ಅವುಗಳಿಂದ ಸರ್ಕಾರಕ್ಕೆ ಏನೂ ಲಾಸ ಆಗುತ್ತಿವೆ. ಏಕೆ ಲಾಸ ಆಗುತ್ತಿದೆ ಎಂದರೆ, ಆ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕ ಜನರು, ಹೈದರಾಬಾದ್ ಕರ್ನಾಟಕದವರು ಕೇವಲ ೨-೩ ಪರ್ಸೆಂಟ್ ಮಾತ್ರ ಇದ್ದಾರೆ. ಎಲ್ಲರೂ ಬಾಂಬೆ ಮುಂತಾದ ಕಡೆಗಳಿಂದ, ಹೊರಗಿನವರೇ ಈ ಖಾಸಗಿ ಕಾರ್ಖಾನೆಗಳಿಗೆ ಬಂದು ಜಾಸ್ತಿ ಸಂಪಾದನೆ ಮಾಡುತ್ತಿದ್ದಾರೆ. ಇವರು ಸರ್ಕಾರಕ್ಕೆ ತಪ್ಪು ಲೆಕ್ಕ ತೋರಿಸುತ್ತಿದ್ದಾರೆ. ಈ ದೆಸೆಯಿಂದ ನಮ್ಮ ಸರ್ಕಾರವೇ ಏಕೆ ಫ್ಯಾಕ್ಟರಿಗಳನ್ನು ತೆಗೆಯಬಾರದು? ಖಾಸಗಿ ಫ್ಯಾಕ್ಟರಿಗಳವರು ಸರಿಯಾದ ಲೆಕ್ಕಪತ್ರ ಇಟ್ಟಿಲ್ಲ. ಅಲ್ಲಿ ಲೇಬರ್ಸ್ ಕೂಡ ನಮ್ಮ ಭಾಗದವರು ಇಲ್ಲ. ನೀವು ಪ್ರೈವೇಟ್‌ನವರಿಗೆ ಅವಕಾಶ ಕೊಟ್ಟಿದ್ದೀರಿ. ಸರ್ಕಾರದಿಂದ ಈ ಖಾಸಗಿ ಸಿಮೆಂಟ್ ಫ್ಯಾಕ್ಟರಿಗಳಿಗೆ 25-30 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೀರಿ. ಇವರೆಲ್ಲರೂ ದುಡ್ಡನ್ನು ದೋಚಿಕೊಂಡು ಹೋಗುತ್ತಿದ್ದಾರೆ. ಇವತ್ತು ಎಷ್ಟೋ ಸಿಮೆಂಟ್ ಫ್ಯಾಕ್ಟರಿಗಳು ಬಂದ್ ಮಾಡಿದ್ದಾರೆ, ಕನಿಷ್ಟ 25-30 ಸಿಮೆಂಟ್ ಫ್ಯಾಕ್ಟರಿಗಳು ಗುಲ್ಬರ್ಗಾದಲ್ಲಿ ಬಂದ್ ಆಗಿವೆ. ಈ ಸಿಮೆಂಟ್ ಫ್ಯಾಕ್ಟರಿಯವರು ಸಬ್ಸಿಡಿ ಹಣ ತೆಗೆದುಕೊಂಡು ಬಂದ್ ಮಾಡಿದ್ದಾರೆ. ಇವರು ಫ್ಯಾಕ್ಟರಿಯನ್ನು ಮುಚ್ಚಿ ಡೆಲ್ಲಿಗೋ ಅಥವಾ ದೊಡ್ಡ ದೊಡ್ಡ ಊರುಗಳಿಗೋ ಹೋಗಿ ಕುಳಿತಿದ್ದಾರೆ. ಆದಕ್ಕೆ ತಮ್ಮ ಸರ್ಕಾರದ ನಿಲವು ಏನು? ಸಬ್ಸಿಡಿ ತೆಗೆದುಕೊಂಡು ಹೋಗುತ್ತಾರೆ, ನಮ್ಮ ಜನರಿಗೆ ಮೋಸ ಮಾಡುತ್ತಿದ್ದಾರೆ. ಇದರ ಬಗ್ಗೆ ತಮ್ಮ ಕಟ್ಟು ನಿಟ್ಟಿನ ನಿಲುವು ಏನು? ಆ ಭಾಗದ ಜನರಿಗೆ

ನೌಕರಿ ಸಿಕ್ಕುವ ಹಾಗೆ ಮಾಡುತ್ತೀರಾ? ಖಾಸಗಿಯವರ ಮೇಲೆ ಏನಾದರೂ ತಾವು ನಿಯಂತ್ರಣ ಮಾಡುತ್ತೀರಾ? ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದೇನೆ.

ಶ್ರೀಮತಿ ಮನೋರಮಾ ಮಧ್ವರಾಜ್:- ಮಾನ್ಯ ಸಭಾಧ್ಯಕ್ಷರೇ, ಅಲ್ಲಿಯ ಕಾರ್ಖಾನೆಗಳಿಗೆ ಬಾಂಬೆಯಿಂದ ಜನ ಬರುತ್ತಿದ್ದಾರೆಂದು ಹೇಳುತ್ತಿದ್ದಾರೆ, ಇದನ್ನು ನಾನು ನಂಬುವುದಿಲ್ಲ, ಏಕೆಂದರೆ, ಮ್ಯಾನ್ಯುಯಲ್ ಲೇಬರ್ಸ್ ಲೋಕಲ್ ಆಗಿರಬೇಕು. ಏನಾದರೂ ದೊಡ್ಡ ದೊಡ್ಡ ಹುದ್ದೆಗಳಿಗೆ ಮಾತ್ರ, ಎಕ್ಸಿಕ್ಯುಟಿವ್ ಪೋಸ್ಟ್‌ಗಳಿಗೆ ಬಾಂಬೆಯಿಂದ ಕರೆಸಿ ಕೊಳ್ಳಬಹುದೇ ಹೊರತು ಉಳಿದ ಕೆಲಸಗಳಿಗೆ ಸ್ಥಳೀಕರನ್ನೇ ನೇಮಕ ಮಾಡಬೇಕಾಗುತ್ತದೆ.

ಶ್ರೀ ಬಾಬುರಾವ್ ಚಪ್ಪಾಣ್:- ಕೂಲಿ ಕಲಸ ಮಾಡುವುದಕ್ಕೆ ಮಾತ್ರ ಸ್ಥಳೀಯರು, ಉಳಿಕೆ ಕೆಲಸ ಮಾಡುವುದಕ್ಕೆ ಕೊಡುತ್ತಾ ಇಲ್ಲ, ಚಪ್ರಾಸಿ ಮತ್ತು ಕಸ ಹೊಡೆಯುವವರಿಗೆ ಮಾತ್ರ ಕೊಡುತ್ತಿದ್ದಾರೆ. ಇದಕ್ಕಿಂತ ಹೆಚ್ಚಿಗೆ ಪೋಸ್ಟ್‌ಗಳನ್ನು ಕೊಡುತ್ತಾ ಇಲ್ಲ, ನಿಮಗೆ ಅಂಕಿ ಅಂಶಗಳನ್ನು ತೋರಿಸುತ್ತೇನೆ. ಕೆಲವರು ಬೋಗಸ್ ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಬೆಳಗಾಂನವರು ಲೋಕಲ್ ಎಂದು, ಮೈಸೂರಿನವರು ಲೋಕಲ್ ಎಂದೂ ಹೇಳುತ್ತಾರೆ. ಅಕೌಂಟ್ಸ್ ವಿಭಾಗದಲ್ಲಿ, ದೊಡ್ಡ ದೊಡ್ಡ ಪೋಸ್ಟ್‌ಗಳಲ್ಲಿ ಹೊರಗಿನವರೇ ಬಂದಿದ್ದಾರೆ. ಟಾಪ್ ಲೆವಲ್‌ನಲ್ಲಿ ಎಲ್ಲರೂ ಹೊರಗಿನವರೇ ಇದ್ದಾರೆ. ನಮ್ಮ ಜನರಿಗೆ ಕಸ ಹೊಡೆಯುವುದಕ್ಕೆ ಕೊಟ್ಟಿರುತ್ತಾರೆ. ಬೇರೆ ದೊಡ್ಡ ಹುದ್ದೆಗಳಿಗೆ ಯಾರನ್ನೂ ತೆಗೆದುಕೊಳ್ಳುತ್ತಾ ಇಲ್ಲ, ಏಕೆಂದರೆ, ಯೂನಿಯನ್ ಮಾಡಿಕೊಳ್ಳುತ್ತಾರೆ, ಮುಖ್,ರ ಮಾಡುತ್ತಾರೆ ಎಂದು ಲೋಕಲ್‌ನವರಿಗೆ ಅಸ್ಪದ ಕೋಡುತ್ತಾ ಇಲ್ಲ, ಖಾಸಗಿ ಕಾರ್ಖಾನೆಗಳವರು ಮಿನಿಸ್ಟರನ್ನೂ ನೋಡಿಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಅದಕ್ಕಾಗಿ ಸರ್ಕಾರದ ಕಟ್ಟುನಿಟ್ಟಿನ ನಿಲುವೇನು, ಇವರನ್ನು ಯಾವ ರೀತಿ ಕಂಟ್ರೋಲ್ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಅಧ್ಯಕ್ಷರು:- ನಿಮ್ಮ ಪ್ರಶ್ನೆಯಲ್ಲಿ ಎಲ್ಲಿಯೂ ಕೂಡ ಎಂಪ್ಲಾಯ್‌ಮೆಂಟ್ ವಿಚಾರ ರೈಜ್ ಮಾಡಿರುವುದಿಲ್ಲ, ಆ ಭಾಗದ ಸರ್ಕಾರಿ ಸ್ವಾಮ್ಯದ ಕೈಗಾರಿಕೆಗಳನ್ನು ತೆಗೆಯುತ್ತೀರಾ ಎಂದು ಕೇಳಿದ್ದೀರಿ. ಅವರು ನಿರ್ದಿಷ್ಟವಾಗಿ ಮಾಡುವುದಿಲ್ಲವೆಂದೂ ಖಾಸಗಿ ವಲಯದವರು ಯಾರಾದರೂ ಮುಂದೆ ಬಂದರೆ, ಅವರಿಗೆ ಬೇಕಾದ ಸೌಲಭ್ಯ ಕೊಡುತ್ತೇವೆಂದು ಹೇಳಿದ್ದಾರೆ. ಈಗ ನಾನು ಸೂಚನೆ ಮಾಡುತ್ತೇನೆ, ಖಾಸಗಿ ವಲಯದಲ್ಲಿ, ಕೋ ಆಪರೇಟಿವ್ ಸ್ಪಕ್ಟರ್‌ನಲ್ಲಿ ನೀವೇ ಒಂದು ಫ್ಯಾಕ್ಟರಿ ಮಾಡಿ, ನಿಮಗೆ ಎಲ್ಲಾ ಸೌಲಭ್ಯಗಳನ್ನೂ ಕೊಡಿಸುತ್ತೇನೆ.

SRI QUAMARUL ISLAM :- It is a very important question raised by our honoreble member. The honoreble Minister has also accepted that only in the lower category of employment...

MR. SPEAKER:- Again you are also falling into the trap. Where the employment issue raised in this question? How could you raise a supplementary question which does not have relevance to main question. Put up a separate question about recruitment or employment in the higher or technical level in these factories.

SRI QUAMARUL ISLAM :- Sri my supplementary question arise out of the answer given by the Hon'ble Minister. It is a fact that in the lower cadre there are local people employed but in the higher cadre other than local people are employed. Therefore, will the hon'ble Minister give a direction to the private factory owners to appoint only local people to the higher posts also ?

ಶ್ರೀಮತಿ ಮನೋರಮಾ ಮಧ್ವರಾಜ್:- ಮಾನ್ಯ ಸಭಾಧ್ಯಕ್ಷರೇ, ಸ್ಥಳೀಕರು ಇಂತಹ ಉದ್ಯಮಗಳನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಏಂಡಿತಾ ಅವರಿಗೆ ಅವಕಾಶ ಕೊಡುತ್ತೇವೆ.

ಅಧ್ಯಕ್ಷರು:- ಶ್ರೀ ಗುರುಪಾದಪ್ಪ ನಾಗಮಾರಪಲ್ಲಿಯವರೇ ನಿಮ್ಮ 95(528) ಪ್ರಶ್ನೆಗೆ ಸರಕಾರದವರು ಟೈಮ್ ಕೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಈ ಶುಶ್ರೂಷಾ ಕಾರ್ಯಕ್ರಮದ ಪ್ರಶ್ನೆಗೆ ಟೈಮ್ ಕೇಳುವುದಕ್ಕೆ ಏನಿದೆ, ಇಂತಹ ಕಾರ್ಯಕ್ರಮದ ಬಗ್ಗೆ ಉತ್ತರ ಕೊಡುವುದಿಲ್ಲ ಎಂದರೆ ಇದರೊಳಗೆ ಏನಿದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೇ, ಶುಶ್ರೂಷಾ ಕಾರ್ಯಕ್ರಮ ರದ್ದುಪಡಿಸುವುದರ ಬಗ್ಗೆ ಒಂದು ಪ್ರಶ್ನೆ ಹಾಕಿದ್ದಾರೆ. ಜೊತೆಗೆ ಜಿಲ್ಲಾವಾರು ಅಂಕಿ ಅಂಶಗಳನ್ನು ಕೇಳಿದ್ದಾರೆ. ಅವರು ಕೇಳಿರತಕ್ಕಂಥ ಅಂಕಿ ಅಂಶಗಳನ್ನು ನಿಖರವಾಗಿ ಕೊಡಬೇಕಾಗುತ್ತದೆ. ಎಲ್ಲಾ ಜಿಲ್ಲೆಗಳಿಂದ ಸಾಕಷ್ಟು ಮಾಹಿತಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಈ ಪ್ರಶ್ನೆ 18 ನೇ ತಾರೀಖು ನಮ್ಮ ಕೈಗೆ ಬಂದಿದೆ. ಇದಕ್ಕೆ ಕೊಟ್ಟಿದ್ದ ಸಮಯ ಸ್ವಲ್ಪ ಸಾಕಾಗಲಿಲ್ಲ ಎಂದು ಈ ಮನವಿ ಮಾಡಿರುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಇವತ್ತಿಗೂ ಇದರ ಬಗ್ಗೆ ಏನೂ ಮಾಡಿಲ್ಲ. ತಾವು ಎಷ್ಟು ಜನಕ್ಕೆ ನೋಡಿರುತ್ತೀರಿ, ಎಷ್ಟು ಜನಕ್ಕೆ ಇದರಿಂದ ಉಪಕಾರವಾಗಿದೆ, ಎಷ್ಟು ಜನ ಕ್ಯಾನ್ಸರ್‌ನಿಂದ ಸತ್ತು ಹೋದರು ಇದು ಗೊತ್ತಾಗಲಿ.

(ಗೊಂದಲ)

ಶ್ರೀ ಜಿ. ಪುಟ್ಟಸ್ವಾಮಿಗೌಡ:-ಅದನ್ನೇ ಪ್ರಶ್ನೆಯ ಒಂದು ಭಾಗದಲ್ಲಿ ಕೇಳಿದ್ದಾರೆ. ಎಷ್ಟು ಜನ ಸಿಬ್ಬಂದಿ ಇದ್ದಾರೆ ಎಷ್ಟು ಉಪಕರಣಗಳನ್ನು ಕೊಟ್ಟಿದ್ದೀರಿ, ಇವುಗಳ ಬಗ್ಗೆ ಜಿಲ್ಲಾವಾರು ಅಂಕಿ ಅಂಶಗಳು ಬೇಕು, ಪೂರ್ಣ ವಿವರಗಳು ಬೇಕು ಎಂದು ಕೇಳಿದ್ದಾರೆ. ಇವುಗಳನ್ನೆಲ್ಲಾ ತರಿಸುವುದಕ್ಕೆ ಸ್ವಲ್ಪ ಕಾಲಾವಕಾಶ ಬೇಕು.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಶುಶ್ರೂಷಾ ಕಾರ್ಯಕ್ರಮ ಇನ್ನೂ ಶುರುವಾಗಿದೆಯೇ ಇಲ್ಲವೇ? ಇನ್ನೂ ಶುರುವಾಗಿದೆಯೇ ಇಲ್ಲವೇ ಅದನ್ನಾದರೂ ಹೇಳಿರಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಶುಶ್ರೂಷಾ ಕಾರ್ಯಕ್ರಮದ ಬಗ್ಗೆ ಪರ್ಟಿಕ್ಯುಲರ್ ಕೊಶ್ಚನ್ ಏನಿದೆ ಎಂದರೆ, ಹೋದ ವರ್ಷದ ಬಜೆಟ್‌ನಲ್ಲಿ ಈ ಕಾರ್ಯಕ್ರಮವನ್ನು ಅತ್ಯಂತ ಪ್ರತಿಷ್ಠಿತ ಕಾರ್ಯಕ್ರಮ ಎಂದು ಹೇಳಿ ಜಾರಿಗೆ ತಂದರು. ಈಗ ಎರಡನೇ ವರ್ಷದ ಬಜೆಟ್‌ನ್ನು ಇದೇ ಮಾರ್ಚ್ 3ನೇ ತಾರೀಖು ಮಾನ್ಯ ಮುಖ್ಯಮಂತ್ರಿಗಳು ಮಂಡಿಸುತ್ತಿದ್ದಾರೆ. 12ತಿಂಗಳಲ್ಲಿ ಏನಾಗಿದೆ ಎಂಬ ಅಂಕಿ ಅಂಶಗಳು ಬೇಕು. ಈ ಕಾರ್ಯಕ್ರಮದ ಅಡಿಯಲ್ಲಿ ನಾಲ್ಕು ಕೋಟಿ ಜನಕ್ಕೆ ಟೆಸ್ಟ್ ಮಾಡುತ್ತೇವೆಂದು ಹೇಳಿದ್ದರು. ಅದನ್ನಾದರೂ ಹೇಳುವುದಕ್ಕೆ ಆಗುವುದಿಲ್ಲವೇ? ನಾಲ್ಕೂವರೆ ಕೋಟಿ ಜನರಿಗೆ ಮೆಡಿಕಲ್ ಎಕ್ಸಾಮಿನೇಷನ್ ಮಾಡುತ್ತೇವೆಂದು ಹೇಳಿದ್ದರು. ಹೋಗಲಿ ಅದು ಬೇಡ, ಸ್ಟ್ಯಾಟಿಸ್ಟಿಕ್ಸ್ ಬೇಕು. ಯಾವ ಯಾವ ಮಂಡಲ್‌ನಲ್ಲಿ ಯಾವ ಯಾವ ಹಳ್ಳಿಯಲ್ಲಿ ಹೋಗಿದ್ದಾರೆ ಎಂಬುದಕ್ಕೆ ವಿವರಗಳು ಬೇಕು. ಹಾಗಾದರೆ ಒಂದು ಕೆಲಸ ಮಾಡಬಹುದಾಗಿತ್ತು, 12 ತಿಂಗಳ ವಿವರಗಳನ್ನು ಕೊಶ್ಚನ್‌ನಲ್ಲಿ ಕೇಳಿದ್ದು ಅದನ್ನು ನಾಲ್ಕು ದಿನಗಳಲ್ಲಿ ತಿಳಿದುಕೊಳ್ಳುವುದಕ್ಕೆ ಆಗದಿರಬಹುದು. ಆದರೆ ಕಳೆದ ಡಿಸೆಂಬರ್ 31ನೇ ತಾರೀಖಿನವರೆಗೆ ಎಷ್ಟು ಮಾಡಿರುತ್ತಾರೆ ಎಂಬ ಅಂಕಿ ಅಂಶಗಳನ್ನು ಹೇಳುವುದಕ್ಕೆ ಏನು ತೊಂದರೆ ಇದೆ. ಕೊನೆಯಪಕ್ಷ 6 ತಿಂಗಳ ವಿವರಗಳನ್ನಾದರೂ ಹೇಳಬಹುದಾಗಿತ್ತು. ಏತಕ್ಕೆ ಹೇಳುತ್ತಿಲ್ಲ ಎಂದರೆ ಇವರು ಏನೂ ಮಾಡಿಲ್ಲ.

ಅಧ್ಯಕ್ಷರು:- ಮಾರ್ಚ್ 15ರ ಹೊತ್ತಿಗೆ ಬಾಕಿ ವಿವರಗಳನ್ನು ಹೇಳುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಇಡೀ ರಾಜ್ಯದ್ದು ಬೇಡ, ನಿಮ್ಮ ಮತದಾರರ ಕ್ಷೇತ್ರದಲ್ಲಿ ಎಷ್ಟು ಶುಶ್ರೂಷಾ ಕಾರ್ಯಕ್ರಮ ಆಗಿದೆ ಹೇಳಿರಿ ನೋಡೋಣ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ನಾನು ಉತ್ತರ ಕೊಡುವ ದಿವಸ ಅದನ್ನೂ ಕೂಡ ಹೇಳುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಡಾಕ್ಟರ್ ಇಲ್ಲ, ವೆಹಿಕಲ್ಸ್ ಇಲ್ಲ ಯಾವುದೂ ಇಲ್ಲ. ಎಲ್ಲಾ ಹಂಬರ್, ಬೋಗಸ್.

(ಗೊಂದಲ)

ಅಧ್ಯಕ್ಷರು:- ವಿಲ್ ಯು ಬೇರ್ ವಿಥ್ ಮಿ, ಈಗ ವಿರೋಧ ಪಕ್ಷದ ನಾಯಕರು ಏನೋ ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಈ ಪ್ರಶ್ನೆಗೆ ಏತಕ್ಕೆ ಅಷ್ಟೊಂದು ಮಹತ್ವ ಇದೆ ಎಂದು ಹೇಳಿದರೆ....

ಶ್ರೀ ಅಜೀಜ್ ಸೇಠ್:- ತಾವೆಲ್ಲಾ ಆಡ್ಮಿನಿಸ್ಟ್ರೇಷನ್ ಮಾಡಿರುತ್ತೀರಿ, ಆಡ್ಮಿನಿಸ್ಟ್ರೇಷನ್ ಮಾಡಿ ಅನುಭವ ಪಡೆದುಕೊಂಡು ಈ ರೀತಿ ತಲೆ ಬುಡ ಇಲ್ಲದೆ ಬೋಗಸ್ ಬೋಗಸ್ ಎಂದು ಹೇಳಬಾರದು.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:- ಹಾಗಾದರೆ ತಾವು ಉತ್ತರ ಹೇಳಿರಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಜೀಜ್ ಸೇಠ್‌ರವರು ಸಭೆಯಿಂದ ಹೊರಗೆ ಹೋಗುವುದನ್ನು ನೋಡಿ ಓಡಿ ಹೋದರು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇದು ಬಹಳ ಬೇಜವಾಬ್ದಾರಿ. ಈ ಸದನಕ್ಕೆ ಅಗೌರವ. ಒಬ್ಬ ಜವಾಬ್ದಾರಿ ಸಚಿವರು ಈ ರೀತಿ ಬೇಜವಾಬ್ದಾರಿಯುತವಾಗಿ ಏನು ನಡೆದುಕೊಳ್ಳುತ್ತಿದ್ದಾರೆ ಇದು ಸರಿಯಲ್ಲ. ಅವರನ್ನು ದಯವಿಟ್ಟು ಕರೆಯಿಸಿ ಎಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಇದು ಬೋಗಸ್ ಅಲ್ಲ ಎಂದು ಪ್ರೂವ್ ಮಾಡಬೇಕಲ್ಲ.

(ಗೊಂದಲ)

ಅಧ್ಯಕ್ಷರು:- ಅವರು ಓಡಿ ಹೋಗಲಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಸದನದಿಂದ ಕಾಲ್ತೆಗೆದರು ಅಷ್ಟೇ ...

ಶ್ರೀ ಕೆ.ಎಸ್. ಈಶ್ವರಪ್ಪ :- ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಹೋಗಿಬಿಟ್ಟರು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ ಈಗ ಆಗಿರತಕ್ಕಂಥ ಭೀಕರ ಪರಿಣಾಮವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಪ್ರಯತ್ನಮಾಡುತ್ತೇನೆ. ಇದುವರೆವಿಗೂ ಪರೀಕ್ಷೆ ಮಾಡಿಲ್ಲ ಎಂದು ಇವರು ಸುಮ್ಮನೆ ಕುಳಿತಿಲ್ಲ. ಇವರು ಪರೀಕ್ಷೆ ಮಾಡುವುದಕ್ಕೆ ಹೋಗಿ ಹಳ್ಳಿಯಲ್ಲಿರುವ ಜನಗಳಿಗೆ ನಿಮಗೆ ಕ್ಯಾನ್ಸರ್ ಇದೆ ಅಂತ ಡಾಕ್ಟರ್ ಹೇಳುವುದು. ಅವರು ಮುಂದೆ ಏನು ಮಾಡಬೇಕು. ಅವನು 6 ವರ್ಷ ಬದುಕುವಂತಹವನು ಈಗ 6 ದಿವಸದಲ್ಲಿ ಸಾಯತಕ್ಕಂಥ ಪರಿಸ್ಥಿತಿ ಬಂದಿದೆ. ಇದು ಗೊತ್ತಾದ ಮೇಲೆ ಬದುಕುವುದು ಕಷ್ಟ. ಆ ದೃಷ್ಟಿಯಿಂದ ಇದು ಮಹತ್ವ ಇದೆ. ಮತ್ತೆ ಟಿ.ಬಿ. ಅಂತ ಹೇಳುವುದು. ಮತ್ತೆ ಮುಂದೆ ಔಷಧಿ ಕೊಡುವುದಕ್ಕೆ ಏನೂ ವ್ಯವಸ್ಥೆ ಇಲ್ಲ. ಪಾಪ ಅವರಿಗೆ ಟಿ.ಬಿ. ಕ್ಯಾನ್ಸರ್ ಅಂತ ಹೇಳಿ ನಡುರಸ್ತೆಯಲ್ಲಿ ಕೈ ಬಿಡುತ್ತಾರೆ. ನಾನು ಇಂತಹ ಇನ್ಸ್ಸ್ಟೆನ್ಸ್ ಕೊಡುತ್ತೇನೆ. ಪಾಪ ಬದುಕುವವರನ್ನು ಸಾಯಿಸುವ ಸ್ಕೀಮ್ ಇದು ಆಗಿದೆ. ಆದ್ದರಿಂದ ಇದಕ್ಕೆ ಮಾಹಿತಿ ತರುವುದರ ಜೊತೆಗೆ ತಪಾಸಣೆ ಮಾಡಿದ್ದು ಆಯಿತಲ್ಲ. ತಪಾಸಣೆ ಆದ ಮೇಲೆ ಮುಂದೆ ಏನು ಕಾರ್ಯಕ್ರಮ ಎನ್ನುವುದನ್ನು 15 ದಿವಸಗಳಲ್ಲಿ ತಿಳಿದು ಹೇಳಿದರೆ ಒಳ್ಳೆಯದು. ಇಲ್ಲದಿದ್ದರೆ ಇದು ಜನ ಸಾಯತಕ್ಕಂಥ ಕಾರ್ಯಕ್ರಮ ಆಗುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಸ್ವಾಮಿ ತಪಾಸಣೆ ನಡೆದಿಲ್ಲ, ವೈದ್ಯರು ಒಬ್ಬರೂ ಇಲ್ಲ, ಪಿ.ಹೆಚ್.ಸಿ. ಗಳಲ್ಲಿ ಔಷಧಿ ಇಲ್ಲ, ಇದು ಸಂಪೂರ್ಣವಾಗಿ ಜನರಿಗೆ ಮಾಡಿದಂತಹ ಮೋಸ, ಬರೀ ಮೋಸ, ಇದರಲ್ಲಿ ಏನೂ ಆಗಿಲ್ಲ....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಈ ಕಾರ್ಯಕ್ರಮ ಏನೂ ಆಗಿಲ್ಲ, ಮಾನ್ಯ ಮಂತ್ರಿಗಳು ಅಸಹಾಯಕರಾಗಿದ್ದಾರೆ. ಉತ್ತರ ಕೊಡುವುದಕ್ಕೆ ಆಗುವುದಿಲ್ಲ . ಆದ್ದರಿಂದ ಈ ಸ್ಕೀಮನ್ನು ವಿತ್‌ಡ್ರಾ ಮಾಡುತ್ತೀರಾ?

(ಗೊಂದಲ)

ಅಧ್ಯಕ್ಷರು:- ಆಗಲಿ....

(ಗೊಂದಲ)

ಅಧ್ಯಕ್ಷರು:- ಈ ಪ್ರಶ್ನೆ ಮತ್ತೆ ಸದನದ ಮುಂದೆ ಬರುತ್ತದೆ. 15 ದಿವಸ ಟೈಮ್ ಕೇಳಿದ್ದಾರೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಅವರು ತಪ್ಪಿಸಿಕೊಳ್ಳುವುದಕ್ಕೆ ಹೇಳುತ್ತಿದ್ದಾರೆ. ಈ ಸದನದಲ್ಲಿ ಸತ್ಯ ಸಂಗತಿಯನ್ನು ಹೇಳಲಾರದೆ ಈ ಕಾರ್ಯಕ್ರಮವನ್ನು ಜಾರಿ ಮಾಡಿಲ್ಲ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಈ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ 200ಕೋಟಿ ರೂಪಾಯಿಗಳು ಬೇಕು. ತಾವು ಇಟ್ಟಿರುವುದು ಒಂದು ಕೋಟಿ ರೂಪಾಯಿಗಳು. ಈಗ ಇರುವ ಆಸ್ಪತ್ರೆಗಳಲ್ಲಿ ಒಳ್ಳೆಯ ಡಾಕ್ಟರ್ಸ್‌ನ್ನು ಹಾಕಿ ಒಳ್ಳೆಯ ಔಷಧಿ ಕೊಟ್ಟರೆ ಸಾಕು. ಯಾರು ಕೇಳಿದ್ದರು ಈ ಅನಗತ್ಯ ಕಾರ್ಯಕ್ರಮವನ್ನು, ಅಗತ್ಯ ಇರತಕ್ಕಂಥ ಕಾರ್ಯಕ್ರಮವನ್ನು ಮಾಡಿ ಕಾರ್ಯರೂಪಕ್ಕೆ ತರದೆ ಇನ್ನೊಂದು ಕಾರ್ಯಕ್ರಮ ಏಕೆ ಬೇಕು. ಇರುವ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಸರಿಯಾಗಿ ಮಾಡಿ.

ಶ್ರೀ ಬಿ.ಎಚ್. ಬನ್ನಿಕೋಡ್:- ಇರತಕ್ಕಂಥ ಆಸ್ಪತ್ರೆಗಳಲ್ಲಿಯೇ ಔಷಧಿ ಇಲ್ಲ, ಮತ್ತು.....

(ಗೊಂದಲ)

ರಾಜ್ಯದಲ್ಲಿ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ

96 (583) ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಎಷ್ಟು ಕಾಲೇಜು, ಪ್ರೌಢಶಾಲೆ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ನಿಲಯಗಳು ಇವೆ (ಜಿಲ್ಲಾವಾರು ವಿವರ ನೀಡುವುದು)

ಆ) ಈ ಪೈಕಿ ಬೆಂಗಳೂರು(ಗ್ರಾಮಾಂತರ) ಜಿಲ್ಲೆಯಲ್ಲಿ ಪ.ಜಾತಿ, ಪ.ವರ್ಗ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ವಿದ್ಯಾರ್ಥಿನಿಲಯಗಳ ತಾಲ್ಲೂಕುವಾರು ಮಾಹಿತಿ ನೀಡುವುದು.

ಇ) ಸರ್ಕಾರವು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಾಗ ಯಾವ ನೀತಿಯನ್ನು ಅನುಸರಿಸುತ್ತದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ)	ಸಮಾಜ ಕಲ್ಯಾಣ	ಟಿಸಿಖಂ	ಶಿಕ್ಷಣ ಇಲಾಖೆ
1) ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿ ನಿಲಯಗಳು	104	69	18
2) ಪ್ರೀ-ಮೆಟ್ರಿಕ್ ವಿದ್ಯಾರ್ಥಿನಿಲಯಗಳು	705	706	-
3) ಅನುದಾನಿತ ವಿದ್ಯಾರ್ಥಿನಿಲಯಗಳು (ಪ್ರೀ- ಮೆಟ್ರಿಕ್)	270	—	—